ಮುಖ್ಯವಾಗಿ ಕೇರಳದಿಂದ ರೈಲೇರಿ ಬರುವವರು. ಗೇಟಿನ ಹೊರಗೆ ತೂಗಿಸಿದ್ದ ಹಿತ್ತಾಳೆಯ ಜಾಗಟೆಗೆ, ಪಕ್ಕದಲ್ಲೇ ತೂಗಿಸಿದ ಕಬ್ಬಿಣದ ಸರಳಿನಿಂದ ಹೊಡೆದರೆ ಒಳಗಿನಿಂದ ಬರುವ ದಡೂತಿಯೊಬ್ಬ, ಬಂದವರನ್ನು ಕರೆದುಕೊಂಡು ಒಳಗೆ ಹೋಗುತ್ತಿದ್ದನಂತೆ.

ಆ ಜ್ಯೋತಿಷಿಣಿಯ ಬಗ್ಗೆ ಹಲವಾರು ಕತೆಗಳಿದ್ದವು. ದಪ್ಪ ದೇಹದ ಅವಳಿಗೆ ನೂರಿಪ್ಪತ್ತು ವರ್ಷ ದಾಟಿದೆಯಂತೆ. ತಲೆ ಕುಂಬಳಕಾಯಿಯಷ್ಟು ದೊಡ್ಡದಂತೆ, ದೊಡ್ಡ ದೊಡ್ಡ ಕಿವಿಗಳಂತೆ. ಕಡುಗೆಂಪು ಕಣ್ಣುಗಳಂತೆ. ಅವಳ ಮೂಲಕ ಯಾರಿಗಾದರೂ ಮಾಟ ಮಾಡಿಸಿದರೆ ಅಂಥವರು ರಕ್ತ ಕಾರಿ ಸಾಯುವುದು ಗ್ಯಾರಂಟಿಯಂತೆ. ಅವಳು ಹೇಳಿದ ಯಾವ ಭವಿಷ್ಯವೂ ಸುಳ್ಳಾದದ್ದು ಇಲ್ಲವಂತೆ. ಅದೆಂತಹಾ ಸಂದೇಹಗಳಿಗೂ ಚಿಟಿಕೆ ಹಾರಿಸುವುದರಲ್ಲಿ ಉತ್ತರಿಸಲು ಶಕ್ತಳಂತೆ ಇತ್ಯಾದಿ, ಇತ್ಯಾದಿ. ಆದರೆ, ತಾನು ನೀಡುವ ಉತ್ತರಕ್ಕೆ ಪ್ರತಿಯಾಗಿ ಅವಳು ಬಲು ದೊಡ್ಡ ಮೊತ್ತವನ್ನು ನಿರೀಕ್ಷಿಸುತ್ತಿದ್ದಳಂತೆ. ಇಲ್ಲದಿದ್ದರೆ ಭವಿಷ್ಯ ಕೇಳಲು ಬಂದವರ ಮುಖವನ್ನೇ ನೋಡುತ್ತಿರಲಿಲ್ಲವಂತೆ.

ಆ ಮಾಟಗಾತಿಯ ಮತ್ತೊಂದು ಮುಖವನ್ನು ನಮಗೆ ಪರಿಚಯಿಸಿದ್ದು, ನಮ್ಮ ಕ್ರಾಫ್ಟ್ ಟೀಚರ್ ಆಗಿದ್ದ ನಾರಾಯಣ ಮಣಿಯಾಣಿ ಮಾಸ್ತರು. ಆಗ ನಾನು ಎಂಟನೆಯ ತರಗತಿಯಲ್ಲಿದ್ದೆ. ನಮ್ಮಂತೆಯೇ ಮಣಿಯಾಣಿ ಮಾಸ್ತರು ತಿರುವಾಂಕೂರಿನ ಹೈಸ್ಕೂಲೊಂದರಲ್ಲಿ ಓದುತ್ತಿದ್ದ ದಿನಗಳಲ್ಲಿ, ಈ ಜ್ಯೋತಿಷಿಣಿಯು ಅವರ ಊರಿಗೂ ಬಂದಿದ್ದಳಂತೆ. ತಿರುವಾಂಕೂರು ಕುಟುಂಬದ ರಾಜಕುಮಾರನೊಬ್ಬ ಸಾವು ಬದುಕಿನ ಸಮಸ್ಯೆಯೊಂದರಲ್ಲಿ ಸಿಲುಕಿಕೊಂಡಿದ್ದ ತನ್ನ ಗೆಳೆಯ ರಾಜೇಂದ್ರನನ್ನು ಬಚಾವು ಮಾಡಲು ನಮ್ಮೂರ ಮಾಟಗಾತಿಯನ್ನು ಅಲ್ಲಿಗೆ ಕರೆಸಿಕೊಂಡಿದ್ದನಂತೆ.

ಗೆಳೆಯ ರಾಜೇಂದ್ರನ ಸಮಸ್ಯೆಯೂ ವಿಚಿತ್ರವಾಗಿತ್ತು. ತಿರುವಾಂಕೂರು ರಾಜಾಧಿಪತ್ಯದ ನ್ಯಾಯಾಲಯವು, ರೈತಹೋರಾಟವೊಂದರಲ್ಲಿ ಸೆರೆಹಿಡಿಯಲ್ಪಟ್ಟ ರಾಜೇಂದ್ರನ ವಿರುದ್ಧ ರಾಜದ್ರೋಹದ ಆಪಾದನೆ ಹೊರಿಸಿ, ಮರಣದಂಡನೆ ಶಿಕ್ಷೆ ವಿಧಿಸಿತ್ತು. ಸುದ್ದಿ ತಿಳಿದ ರಾಜಕುಮಾರನು, ತನ್ನ ಗೆಳೆಯನಿಗೆ ಜೀವದಾನ ನೀಡುವಂತೆ ತಂದೆಯನ್ನು ಪ್ರಾರ್ಥಿಸಿದ್ದ. ಮಗನ ವಿನಂತಿಯನ್ನು ಮನ್ನಿಸಿದ ರಾಜನು, ರಾಜೇಂದ್ರನನ್ನು ರಾಜಭವನಕ್ಕೆ ಕರೆಸಿಕೊಂಡಿದ್ದ. ತಾನು ಕೇಳುವ ಪ್ರಶ್ನೆಯೊಂದಕ್ಕೆ ಸಮರ್ಪಕವಾದ ಉತ್ತರವನ್ನು ನೀಡಿದರೆ, ರಾಜೇಂದ್ರನ ಶಿಕ್ಷೆಯನ್ನು ಮಾಫಿ ಮಾಡುವೆನೆಂದೂ, ಉತ್ತರದಿಂದ ಸಂತುಷ್ಟನಾಗದಿದ್ದರೆ ಶಿಕ್ಷೆಯನ್ನು ಕಾಯಂ ಮಾಡುವೆನೆಂದೂ ರಾಜ ಹೇಳಿದ್ದ. ಅಷ್ಟು ಮಾತ್ರವಲ್ಲ, ತನ್ನ ಪ್ರಶ್ನೆಗೆ ಉತ್ತರವನ್ನು ನೀಡಲು ಒಂದು ವರ್ಷದ ಅವಧಿಯನ್ನೂ, ಅಲ್ಲಿಯವರೆಗೆ ರಾಜೇಂದ್ರನಿಗೆ ತಾತ್ಕಾಲಿಕ ಬಿಡುಗಡೆಯ ಆದೇಶವನ್ನೂ ಪ್ರಕಟಿಸಿದ್ದ.

ರಾಜನು ಕೇಳಿದ ಪ್ರಶ್ನೆ ಹೀಗಿತ್ತು: 'ಹೆಂಡತಿಯೊಬ್ಬಳು ಗಂಡನಿಂದ ನಿಜಕ್ಕೂ ಬಯಸುವುದು ಏನನ್ನು?'

ಆಗಿನ್ನೂ ಮದುವೆಯಾಗಿರದಿದ್ದ ರಾಜೇಂದ್ರನಿಗೆ, ಆ ಪ್ರಶ್ನೆಗೆ ಉತ್ತರಿಸುವುದು ಬಲು ಸುಲಭ ಅನ್ನಿಸಿತ್ತು. 'ತನ್ನ ಗಂಡನ ಪ್ರಾಮಾಣಿಕ ಪ್ರೀತಿಯನ್ನಲ್ಲದೆ ಹೆಂಡತಿಯೊಬ್ಬಳು ಮತ್ತೇನನ್ನು ಬಯಸಬಹುದು?' ತಕ್ಷಣವೇ ಉತ್ತರಿಸಬೇಕೆಂದುಕೊಂಡರೂ ತಡೆದುಕೊಂಡಿದ್ದ. ತನ್ನ ಉತ್ತರ ತಪ್ಪಾಗಿಬಿಟ್ಟರೆ, ಇಂದೇ ಗಲ್ಲಿಗೇರಬೇಕಾಗಬಹುದು. ಹೇಗೂ ಒಂದು ವರ್ಷದ ಅವಧಿಯಿದೆ. ಒಮ್ಮೆ ಬಿಡುಗಡೆಗೊಂಡು ಹಲವರ ಜೊತೆಗೆ ಚರ್ಚಿಸಿ ನಿರ್ಧರಿಸುವುದೇ ಜಾಣತನವೆಂದು ಯೋಚಿಸಿ, ಸವಾಲು ಸ್ವೀಕರಿಸಿ ತಾತ್ಕಾಲಿಕ ಕರಾರಿನಂತೆ ಜೈಲಿನಿಂದ ಬಿಡುಗಡೆಯಾಗುತ್ತಾನೆ.